1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**237/2017**

ಹೆಸರುಃ ಪ್ರದೀಪ ಪಾಟೀಲ್ ಚಾಸಾಃ 4

ತಂದೆಃ ಚನ್ನಬಸವನಗೌಡ ಫ್ರಾಸಾ 3

ವಯಸ್ಸುಃ 34 ವರ್ಷ

ಉದ್ಯೋಗಃ ಕೆನರಾ ಬ್ಯಾಂಕ್ ಶಾಖಾ ವ್ಯವಸ್ಥಾಪಕ

ವಾಸ ಸ್ಥಳಃ ಚಿಕ್ಕಜಾಜೂರು

ಸಾಕ್ಷಿಗೆ ದಿನಾಂಕಃ 06-04-2021 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ಅಜ್ಜಿಹಳ್ಳಿಯ ಕೆನರಾ ಬ್ಯಾಂಕ್ ನಲ್ಲಿ ಶಾಖಾ ವ್ಯವಸ್ಥಾಪಕನಾಗಿ 2013 ರಿಂದ 2016 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ18-06-2014 ರಂದು ಅಜ್ಜಿಹಳ್ಳಿ ಗ್ರಾಮದ ಆರೋಪಿಯು ನಮ್ಮ ಬ್ಯಾಂಕ್ ಗೆ ಕೃಷಿ ಸಾಲಕ್ಕಾಗಿ ತಮ್ಮ ಜಮೀನಿಗೆ ಸಂಬಂದಿಸಿದ ಪಹಣಿ, ಮ್ಯುಟೇಶನ್ ರಿಜಿಸ್ಟರ್, ವಂಶವೃಕ್ಷ ಮತ್ತು ಇತರೆ ದಾಖಲೆಗಳನ್ನು ತೆಗೆದುಕೊಂಡು ಬಂದಿದ್ದರು. ಸದರಿ ವ್ಯಕ್ತಿಯು ಹಾಜರುಪಡಿಸಿದ ದಾಖಲೆಗಳಲ್ಲಿ ದೊಂದರ ಘಟ್ಟ ಗ್ರಾಮದ ಸರ್ವೆ ನಂ.28/ಪಿ1 ರ ಪಹಣಿಯಲ್ಲಿ ಬೇರೆ ಬ್ಯಾಂಕ್ ನಿಂದ ಸಾಲ ಪಡೆದ ಬಗ್ಗೆ ಮಾಹಿತಿ ದೊರೆತಿರುತ್ತದೆ. ಹಾಗಾಗಿ ಸದರಿ ಸಾಲವನ್ನು ತಿರುವಳಿ ಮಾಡದೆ ನಮ್ಮ ಬ್ಯಾಂಕ್ ನಿಂದ ಸದರಿ ಸ್ವತ್ತಿಗೆ ಸಾಲ ನೀಡಲು ಬರುವುದಿಲ್ಲ ಎಂದು ತಿಳಿಸಿದಾಗ ಆರೋಪಿಯು ನನ್ನ ಹೆಸರಿನಲ್ಲಿ ಸಾಲ ಇಲ್ಲ ಶಕುಂತಲ ಎಂಬ ಹೆಸರನಲ್ಲಿ ಸಾಲ ಇದೆ ಎಂದು ತಿಳಿಸಿರುತ್ತಾರೆ. ಹಾಗಾಗಿ ಆರೋಪಿಗೆ ಮ್ಯುಟೇಶನ್ ರಿಜಿಸ್ಟರ್.72/2005-06 ತಂದು ಹಾಜರುಪಡಿಸಲು ಸೂಚಿರಸಿರುತ್ತೇವೆ. ದಿಃ19-06-2014 ರಂದು ಆರೋಪಿಯ ಪುನಃ ನಮ್ಮ ಬ್ಯಾಂಕ್ ಗೆ ಬಂದು ಸದರಿ ಮ್ಯುಟೇಶನ್ ರಿಜಿಸ್ಟರ್ ನ್ನು ಹಾಜರುಪಡಿಸಿರುತ್ತಾರೆ. ಅದರಲ್ಲಿ ಸರ್ವೆ ನಂ.28/ಪಿ1 ಶಕುಂತಲ ಎಂಬುವವರ ಹೆಸರಿಗೆ ಮ್ಯುಟೇಶನ್ ಆಗಿರುತ್ತದೆ. ಮ್ಯುಟೇಶನ್ ನಲ್ಲಿ ಶಕುಂತಲ ಎಂಬ ಹೆಸರು ಇದ್ದು ಪಹಣಿ ಆರೋಪಿಯ ಹೆಸರಿಗೆ ಹೇಗೆ ಬಂದಿರುತ್ತದೆ ಎಂಬ ಬಗ್ಗೆ ಗೊಂದಲ ಉಂಟಾಗಿ ಆ ಬಗ್ಗೆ ನಾವು ತಹಶೀಲ್ದಾರವರಿಗೆ ಅರ್ಜಿ ಕೊಟ್ಟಿರುತ್ತೇವೆ. ದಿಃ11-07-2014 ರಂದು ಪೊಲೀಸರು ನಮ್ಮ ಬ್ಯಾಂಕ್ ಗೆ ಬಂದು ತಹಶೀಲ್ದಾರವರು ಈ ಬಗ್ಗೆ ದೂರು ಸಲ್ಲಿಸಿದ್ದಾರೆ ಎಂದು ಹೇಳಿ ದಾಖಲೆ ಕೇಳಿದ್ದರು ನಾವು ಕೊಟ್ಟಿರುತ್ತೇವೆ.

ದಿಃ12.07.2014 ರಂದು ಪೊಲೀಸರು ನಮ್ಮ ಬ್ಯಾಂಕ್ ಗೆ ಬಂದು ಬೆಳಗ್ಗೆ 11.15 ರಿಂದ 12.15 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಸದರಿ ಮಹಜರ್ ಗೆ ನಾನು ಸಹಿ ಮಡಿರುತ್ತೇನೆ. ಸದರಿ ಮಹಜರ್ ನ್ನು ಈಗಾಗಲೇ ನಿಶಾನೆ ಪಿ ಶ 2 ಎಂದು ಗುರುತಿಸಲಾಗಿದ್ದು, ಸಹಿಯನ್ನು ನಿಶಾನೆ ಪಿ 2 ಬಿ ಎಂದು ಗುರುತಿಸಲಾಯಿತು. ನನ್ನ ಜೊತೆ ಸದರಿ ದಾಖಲೆ ಚಾಸಾ 2 ಮತ್ತು 3 ರವರು ಸಹಿ ಮಾಡಿರುತ್ತಾರೆ. ನಾನು ಪೊಲೀಸರಿಗೆ ಈ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ. ಆರೋಪಿ ನಮ್ಮ ಬ್ಯಾಂಕ್ ನಲ್ಲಿ ಸಾಲ ಪಡೆಯಲು ಸಲ್ಲಿಸಿದ್ದ ಎನ್ ಓ ಸಿ ಯನ್ನು ಪೊಲೀಸರಿಗೆ ತನಿಖೆಯ ಸಮಯದಲ್ಲಿ ಕೊಟ್ಟಿರುತ್ತೇವೆ. ಸದರಿ ದಾಖಲೆಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಶಾನೆಪಿ 3 ಎಂದು, ಸಹಿಯನ್ನು ನಿಶಾನೆ ಪಿ 3 ಎ ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ.

ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ -

ನನಗೆ ಅಕೌಂಟ್ಸ್ ವಿಚಾರವಾಗಿ ಮಾತ್ರ ತಿಳುವಳಿಕೆ ಇರುತ್ತದೆ ಎಂದರೆ ಸರಿಯಲ್ಲ. ಕಂದಾಯ ದಾಖಲಾತಿಗಳ ಬಗ್ಗೆ ನನಗೆ ಸಾಕಷ್ಟು ತಿಳುವಳಿಕೆ ಇರುತ್ತದೆ. ಮ್ಯುಟೇಶನ್ ಮತ್ತು ಪಹಣಿಯನ್ನು ಕಂದಾಯ ಇಲಾಖೆಯವರು ನೀಡುತ್ತಾರೆ ಎಂದರೆ ಸರಿ. ಸರ್ವೆ ನಂ.28/ಪಿ1 ಆರೋಪಿ ನೀಡಿದ ದಾಖಲೆಯ ಮೇರೆಗೆ ಅವರ ಹೆಸರಿನಲ್ಲಿ ಇತ್ತು. ಸದರಿ ಸರ್ವೆ ನಂಬರ್ ಗೆ ಸಂಬಂದಿಸಿದ ಮ್ಯುಟೇಶನ್ ರಿಜಿಸ್ಟರ್ ಆರೋಪಿ ಮತ್ತು ಅವರ ಅಕ್ಕ ಶಕುಂತಲ ರವರ ಹೆಸರಿಗೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಮಹಜರ್ ನ್ನು ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ಮಹಜರ್ ನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,

ಚನ್ನಗಿರಿ